**ದಿನಾಂಕ: 14-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಅರ್ಜಿಯ ಆದೇಶದ ಮೇರೆಗೆ ಮುಂದುವರೆದ _ಪಾಟೀ ಸವಾಲು : ಶ್ರೀ. ಎಸ್ ಎನ್ ಎಲ್ ವಕೀಲರಿಂದ ಆರೋಪಿ ಪರವಾಗಿಃ**

3) ತನಿಖಾಧಿಕಾರಿಯವರಿಗೆ ದಿಃ28-02-2022 ರಂದು ಹೇಳಿಕೆ ನೀಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ವಾಹನ ರಸ್ತೆಯ ಯಾವ ಭಾಗದಲ್ಲಿ ಆರೋಪಿ ವಾಹನ ನಿಲ್ಲಿಸಿದ್ದರು ಎಂದು ಹೇಳಿರುವುದಿಲ್ಲ ಎನ್ನುವುದು ಸರಿ. ವಾಹನಗಳು ಸುಗಮವಾಗಿ ಓಡಾಡುತ್ತಿದ್ದರು ಎಂದು ಪ್ರಶ್ನಿಸಲಾಗಿ ಸಾಕ್ಷಿ ಎಡಭಾಗದಲ್ಲಿ ವಾಹನ ನಿಲ್ಲಿಸಿದ್ದು, ಬಲಭಾಗದಲ್ಲಿ ವಾಹನ ಹೋಗುತ್ತಿದ್ದವು ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ 10 ರಿಂದ 15 ಜನರು ಇದ್ದರು. ಸ್ಥಳದಲ್ಲಿ ಇದ್ದವರು ಯಾರು ಯಾರು ಎಂದು ಹೇಳಲು ಆಗುವುದಿಲ್ಲ, ಸಾಕ್ಷಿ ಮಾಡಿರುವವರು ಮಾತ್ರ ಗೊತ್ತು.

4) ಘಟನೆಯಾದ ದಿನ ನೀವೇನಾದರೂ ಸಹಿ ಮಾಡಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಸಹಿ ಮಾಡಿಲ್ಲ ಎಂದು ನುಡಿಯುತ್ತಾರೆ. ಘಟನೆ ದಿನ ನಾನು ಹೇಳಿಕೆ ನೀಡಿಲ್ಲ ಎನ್ನುವುದು ಸರಿಯಲ್ಲ. ಠಾಣೆಗೂ ಘಟನೆಯಾದ ಸ್ಥಳಕ್ಕೂ ಅರ್ಧ ಕಿ. ಮಿ. ಅಂತರ ಇರುತ್ತದೆ. ಸ್ಥಳದಲ್ಲಿ ಜನರು ಕಾಲು ಗಂಟೆ ಇದ್ದರು. ಚಾಸಾ 1 ರವರು ಗಲಾಟೆ ಆದ ತಕ್ಷಣವೇ ದೂರು ನೀಡಿರುತ್ತಾರೆ. ಘಟನೆ ಆದಾಗಲೇ ಆರೋಪಿಗಳನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ ಮತ್ತು ವಾಹನಗಳನ್ನು ಸಹ ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ.

5) ಆರೋಪಿತರು ಯಾವುದೇ ರೀತಿ ನಮ್ಮ ಮತ್ತು ಚಾಸಾ 1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರನ್ನು ಮೊದಲು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ದೂರು ನೀಡಿರುತ್ತಾರೆ. ಚಾಸಾ 1 ರವರಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಎಂ ಎಸ್ ಶಶಿಕಲ)

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು.